ವಿಧಾನಮಂಡಲ ಅಧಿವೇಶನಕ್ಕೆ ಕೋವಿಡ್ ಟೆಸ್ಟ್ | ಸಾರ್ವಜನಿಕರ ವೀಕ್ಷಣೆಗೆ ಅವಕಾಶವಿಲ್ಲ | ಆಸನದ ನಡುವೆ ಪಾರದರ್ಶಕ ಶೀಟ್ ಅಳವಡಿಕೆ

# ಕರೋನಾ ಟೆಸ್ಟ್ ಇದ್ರೆ ಎಂಟ್ರಿ

9/9/20

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಕರೋನಾ ಆತಂಕದ ನಡುವೆಯೂ ವಿಧಾನ ಮಂಡಲ ಅಧಿವೇಶನಕ್ಕೆ ಸಚಿವಾಲಯ ಕರೋನಾ ಟೆಸ್ಟ್, ಸಾರ್ವಜನಿಕ ನಿರ್ಬಂಧ ಹಾಗೂ ಹಲವು ಕಟ್ಟುಪಾಡುಗಳ ನಡುವೆ ಅಧಿವೇಶನ ನಡೆಸಲು ಸಜ್ಜಾಗಿದೆ.

ಈ ಬಗ್ಗೆ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಸೆ.21ರಿಂದ ನಡೆಯುವ ವಿಧಾನಮಂಡಲ ಕಲಾಪದಲ್ಲಿ ಭಾಗವಹಿಸುವ ಸಚಿವರು, ಶಾಸಕರು, ಅಧಿಕಾರಿಗಳು, ಪತ್ರಕರ್ತರು ಮತ್ತು ಸಚಿವಾಲಯ ಸಿಬ್ಬಂದಿ ಕಡ್ಡಾಯವಾಗಿ ಕರೋನಾ ಟೆಸ್ಟ್ ಮಾಡಬೇಕು ಎಂದು ಸ್ಪಷ್ಟಪಡಿಸಿದರು.

ವಿಧಾನಸಭೆ ಆವರಣ ಪ್ರವೇಶಿಸುವ ಪ್ರತಿಯೊಬ್ಬರು 72 ಗಂಟೆ ಮುಂಚಿತವಾಗಿ ಕೋವಿಡ್ ಟೆಸ್ಟ್ ಮಾಡಿಸಿ, ಅದರ ವರದಿ ಇಟ್ಟುಕೊಂಡಿರಬೇಕಾಗುತ್ತದೆ. ಇದು ಎಲ್ಲರಿಗೂ ಅನ್ವಯ. ಹೀಗಾಗಿ ಟೆಸ್ಟ್ ಮಾಡಿಸಲು ವಿಶೇಷ ವ್ಯವಸ್ಥೆ ಮಾಡಲಾಗುತ್ತಿದೆ. ಈ ಬಗ್ಗೆ ಸಚಿವರು ಮತ್ತು ಆರೋಗ್ಯ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಲಾಗಿದೆ ಎಂದರು.

ಸೆ.18ರಂದು ಅಧಿಕಾರಿ, ಸಿಬ್ಬಂದಿ, ಮಾಧ್ಯಮ ಪ್ರತಿನಿಧಿಗಳಿಗಾಗಿ ವಿಧಾನಸೌಧದಲ್ಲಿ ಟೆಸ್ಟ್ ನಡೆಸಲಾಗುತ್ತದೆ. ಶಾಸಕರು, ಸಚಿವರು ತಾಲೂಕು ಅಥವಾ ಜಿಲ್ಲಾ ಕೇಂದ್ರದ ಆಸ್ಪತ್ರೆಗಳಲ್ಲಿ ಟೆಸ್ಟ್ ಮಾಡಿಸಲು ಅವಕಾಶ ಮಾಡಿಕೊಳ್ಳುವಂತೆ ಆರೋಗ್ಯ ಇಲಾಖೆಗೆ ತಿಳಿಸಲಾಗಿದೆ ಎಂದರು.

ಆರ್‌ಟಿ-ಪಿಸಿಆರ್ ಟೆಸ್ಟ್ ಮಾಡಿಸಿ ಪ್ರಮಾಣಪತ್ರ ತರುವುದು ಮಾತ್ರ ಕಡ್ಡಾಯ. ಅನಿವಾರ್ಯ ಸಂದರ್ಭದಲ್ಲಿ ಟೆಸ್ಟ್ ಮಾಡಿಸಿಕೊಂಡೇ ಬರಬೇಕೆಂದು ಕಡ್ಡಾಯಗೊಳಿಸಲಾಗಿದೆ. ಇಲ್ಲಿಗೆ ಬಂದ ನಂತರ ಉಷ್ಣಾಂಶ ಪರೀಕ್ಷೆ, ಸ್ಯಾನಿಟೈಸರ್ ಬಳಕೆ, ಫೇಸ್ ಶೀಲ್ಡ್ ಬಳಕೆಗೆ ಅವಕಾಶ ಮಾಡಿಕೊಡಲಾಗುತ್ತದೆ ಎಂದು ಹೇಳಿದರು.

**ಪ್ರೇಕ್ಷಕರ ಗ್ಯಾಲರಿಗಿಲ್ಲ ಅವಕಾಶ:** ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಉದ್ದೇಶದಿಂದ ಪ್ರೇಕ್ಷಕರ ಗ್ಯಾಲರಿಗೆ ಈ ಬಾರಿ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ನೀಡುವುದಿಲ್ಲ. ಹಾಗೆಯೇ ಅಧಿಕಾರಿಗಳ ಗ್ಯಾಲರಿಯಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತದೆ, ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಮಾತ್ರ ತಮ್ಮ ಇಲಾಖೆ ವಿಷಯವಿದ್ದಾಗ ಇರಬೇಕು ಎಂದು ಸೂಚಿಸಲಾಗಿದೆ ಎಂದರು.

ಸಭಾಂಗಣದ ಆಸನ ವ್ಯವಸ್ಥೆಯಲ್ಲಿ ಒಂದಷ್ಟು ಮಾರ್ಪಾಡು ಮಾಡಲಾಗಿದೆ. ಆಸನಗಳ ನಡುವೆ ಪಾರದರ್ಶಕ ಶೀಟ್ ಹಾಕಿ ವಿಭಜಿಸಲಾಗಿದೆ. ಹಿರಿಯರ ಸದಸ್ಯರು ಕಲಾಪದಲ್ಲಿ ಪಾಲ್ಗೊಳ್ಳಬೇಕು ಎಂಬುದು ನಮ್ಮ ಅಪೇಕ್ಷೆ, ಅವರ ಬಗ್ಗೆ ನಮ್ಮ ಸಿಬ್ಬಂದಿ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಾರೆಂದರು. ಅಧಿವೇಶನದ ಕಾರ್ಯಕಲಾಪ ನಿಗದಿ ಮಾಡಲಾಗಿದೆ. ಪ್ರಶ್ನೋತ್ತರ ಅವಧಿ, ಗಮನ ಸೆಳೆಯುವ ಸೂಚನೆ ಸೇರಿ ನಿಯಮಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸಮಯ ಮಿತಿ ಪಾಲನೆಗೆ ಎಲ್ಲರೂ ಗಮನ ಕೊಡಬೇಕೆಂಬುದು ನಮ್ಮ ಅಪೇಕ್ಷೆ ಎಂದರು.



## 31 ವಿಧೇಯಕ ಚರ್ಚೆ

ಹತ್ತು ವಿಧೇಯಕ, 19 ಸುಗ್ರೀವಾಜ್ಞೆ ಈ ಬಾರಿ ಕಲಾಪದಲ್ಲಿ ಮಂಡನೆಯಾಗಲಿದೆ. ಜತೆಗೆ ಈ ಹಿಂದೆ ಮಂಡನೆಯಾಗಿ ಚರ್ಚೆಗೆ ಬಾಕಿ ಉಳಿದಿರುವ ಎರಡು ವಿಧೇಯಕಗಳಿವೆ. ಇವುಗಳಲ್ಲಿ ಕೆಲವು ತಾಂತ್ರಿಕ ಮತ್ತೆ ಕೆಲವು ಗಂಭೀರ ವಿಷಯಗಳಿರುವ ವಿಧೇಯಕವಿದೆ. ಇರುವ ಕಾಲಾವಕಾಶದಲ್ಲಿ ಹೇಗೆ ಅವಕಾಶ ನೀಡಬೇಕೆಂಬುದು ನಮ್ಮ ಮುಂದಿರುವ ಸವಾಲು. ಈ ಬಗ್ಗೆ ಕಲಾಪದ ಮೊದಲ ದಿನ ನಡೆಯುವ ಕಲಾಪ ವ್ಯವಹಾರ ಸಮಿತಿ ಸಭೆಯಲ್ಲಿ ಚರ್ಚೆ ನಡೆಸಲಾಗುತ್ತದೆ ಎಂದು ಹೇಳಿದರು.

## ಬದಲಾವಣೆಗಳೇನು?

- ಮೊಗಸಾಲೆಯಲ್ಲಿ ಯಾರಿಗೂ ಅವಕಾಶವಿಲ್ಲ
- ಮೊಗಸಾಲೆಯಲ್ಲಿದ್ದ ಕ್ಯಾಂಟೀನ್ ಕಾರಿಡಾರ್‌ಗೆ ಶಿಫ್ಟ್
- ಸಚಿವ, ಶಾಸಕರ ಗನ್ ಮ್ಯಾನ್, ಪಿಎಗಳಿಗೆ ಪ್ರತ್ಯೇಕ ಆಸನ ವ್ಯವಸ್ಥೆ
- ಮೊದಲ ಮಹಡಿಗೆ ಸಾರ್ವಜನಿಕರು, ನಿಯೋಗಗಳಿಗೆ ಪ್ರವೇಶ ನಿರ್ಬಂಧ
- ಶಾಸಕರ ಭವನ, ಮೂರನೇ ಮಹಡಿಯಲ್ಲಿ ಸಚಿವರ ಭೇಟಿಗೆ ಅವಕಾಶ
- ಮಾಧ್ಯಮ ಗ್ಯಾಲರಿಯಲ್ಲಿ ವೈಯಕ್ತಿಕ ಅಂತರ ಕಷ್ಟವಾದ್ದರಿಂದ ಪ್ರೇಕ್ಷಕರ ಗ್ಯಾಲರಿಯಲ್ಲಿ ಆಸನ ವ್ಯವಸ್ಥೆ